

ದೈತ್ಯ ಸುದಾನ್ ದೇಗುಲ

ದೂರದಲ್ಲಿರುವ ಜಾಲ್ನ. ಹೈದರಾಬಾದಿನಿಂದ ರೈಲಿನಲ್ಲಿ ಪರ್ತೂರಿಗೆ ಬಂದರೆ ಅಲ್ಲಿಂದ 55 ಕಿ.ಮೀ. ದೂರದಲ್ಲಿ ಲೋನಾರ್ ಸಿಗುತ್ತದೆ.

## ದೈತ್ಯ ಸುದಾನ್ ದೇಗುಲ

ಇಲ್ಲಿ ದೊರೆತ ಹಲವಾರು ಶಾಸನಗಳು, ಸುರಂಗಗಳು, ಪ್ರಾಚೀನ ಕಾಲದ 32 ದೇವಾಲಯಗಳು, ಅವಶೇಷಗಳು ಎಲ್ಲವೂ ಇದರ ಐತಿಹಾಸಿಕ ಮಹತ್ವವನ್ನು ಪುಷ್ಟೀಕರಿಸುತ್ತವೆ. ಹೆಚ್ಚಿನ ದೇಗುಲಗಳು ಜೀರ್ಣಾವಸ್ಥೆಯಲ್ಲಿವೆ. ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆ ಸರೋವರದೊಳಗಿರುವ 15 ಮತ್ತು ಊರೊಳಗಿನ 4 ದೇವಾಲಯಗಳನ್ನು ಮಾತ್ರ ಸಂರಕ್ಷಿಸಿದೆ. ಇವುಗಳಲ್ಲಿ ಸರೋವರದ ಸಮೀಪ ಇರುವ ದೈತ್ಯ ಸುದಾನ್ ಒಂದು. ವೈಷ್ಣವ ಸಂಪ್ರದಾಯದಲ್ಲಿರುವ ಈ ದೇವಸ್ಥಾನದ ಹೆಸರೇ ವಿಚಿತ್ರವಾಗಿದೆ. ಕೆಲವು ಸಂಶೋಧನೆಗಳು ಈ ದೇವಾಲಯದ ಕಾಲವನ್ನು 13–14ನೇ ಶತಮಾನದ ಹೊಯ್ಸಳರ ಕಾಲಕ್ಕೆ ಹೋಲಿಸಿವೆ. ಶಿಲ್ಪಶೈಲಿಯನ್ನು ಆಧರಿಸಿ ಕೆಲವರು 6–12 ಶತಮಾನದ ನಡುವೆ ಚಾಲುಕ್ಯರು ಕಟ್ಟಿಸಿದ ದೇವಾಲಯಗಳಿವು ಎಂದು ವಾದಿಸಿದ್ದಾರೆ.

ಅದ್ಭುತ ಕೆತ್ತನೆಯೊಂದಿಗೆ ಈ ದೇಗುಲ ಮೊದಲು ಸೂರ್ಯನಿಗೆ ಅಂಕಿತಗೊಂಡಿದ್ದು, ನಂತರದಲ್ಲಿ ವಿಷ್ಣುವಿನ ದೇವಾಲಯವಾಗಿ ರೂಪಾಂತರ ಹೊಂದಿತು ಎನ್ನುವ ಮಾಹಿತಿಯನ್ನು ಅಲ್ಲಿನ ಅವಶೇಷಗಳಿಂದ ಸಂಶೋಧಕರು ಕಂಡುಕೊಂಡಿದ್ದಾರೆ.

ಕಪ್ಪುಶಿಲೆಯ ಸುಂದರ ಕೆತ್ತನೆಯಿಂದ ನಕ್ಷತ್ರಾಕಾರದಲ್ಲಿ ಪೂರ್ವಾಭಿಮುಖವಾಗಿ ದೇಗುಲ ನಿರ್ಮಾಣಗೊಂಡಿದೆ. ಮೂರು ದ್ವಾರಗಳಿರುವ ಈ ದೇವಾಲಯದ ಒಳಭಾಗವನ್ನು ಗರ್ಭಗುಡಿ, ಸ್ವರ್ಗಮಂಟಪ ಮತ್ತು ಸಭಾಮಂಟಪ ಎಂದು ಮೂರು ಹಂತಗಳಲ್ಲಿ ಕಾಣಬಹುದು. ಗರ್ಭಗುಡಿಯಲ್ಲಿ ವಿಷ್ಣುವಿನ ಮೂರ್ತಿಯಿದೆ. ಭಾವಣಿಯಲ್ಲಿ ಗಂಧರ್ವಜೋಡಿಗಳ, ಅಪ್ಸರೆಯರ ನೃತ್ಯಭಂಗಿಗಳ ಕೆತ್ತನೆಯಿದೆ. ಸ್ವರ್ಗಮಂಟಪದಲ್ಲಿ ಕೃಷ್ಣ ಮತ್ತು ವಿಷ್ಣುವಿಗೆ ಸಂಬಂಧಿಸಿದ ಕೃಷ್ಣ–ಕಂಸ, ನರಸಿಂಹ–ಹಿರಣ್ಯಕಶಿಪು, ಲೋನಾಸುರ ವಧೆ, ರಾಸಲೀಲೆ ಮತ್ತಿತರ ಕೆತ್ತನೆಯ ಕಥಾಶಿಲ್ಪಗಳಿವೆ.

ದೇವಾಲಯದ ಹೊರಭಾಗದಲ್ಲಿ ಸೂಕ್ಷ್ಮ ಮತ್ತು ಸುಂದರವಾದ ಕೆತ್ತನೆಗಳಲ್ಲಿ ನಾಟ್ಯ ಗಣೇಶ, ನೃತ್ಯ ಶಿವ, ಬ್ರಹ್ಮ, ವಿಷ್ಣು, ರಾಧಾಕೃಷ್ಣ, ಪೂತನಿ, ರಾಮ ಲಕ್ಷ್ಮಣ ಸೀತೆ, ಪರಶುರಾಮ, ವಾಮನ, ರೋಹಿಣಿ ಬಲರಾಮ, ಪುರಾಣ, ರಾಮಾಯಣ–ಮಹಾಭಾರತದ ಕಥೆಗಳು, ದರ್ಪಣ ಸುಂದರಿ, ಮಿಥುನ ಶಿಲ್ಪಗಳು, ಸೂರ್ಯನಮಸ್ಕಾರದ ಯೋಗಭಂಗಿಗಳು ಹಾಗೂ ಯುದ್ಧ ದೃಶ್ಯಗಳು ಕಲಾಕೃತಿಗಳಾಗಿ ಅರಳಿವೆ. ಹೊಯ್ಸಳರ ರಾಜಮುದ್ರೆಯ ಚಿಹ್ನೆ ಇಲ್ಲೆಲ್ಲ ಕಾಣಿಸುವುದರಿಂದ ಈ ದೇಗುಲ ಅವರ ಆಳ್ವಿಕೆಯಲ್ಲಿ ನಿರ್ಮಾಣಗೊಂಡಿರಬಹುದು ಎಂದು ಊಹಿಸಲಾಗಿದೆ.



ಗರ್ಭಗುಡಿಯಲ್ಲಿ ದೈತ್ಯ ಸುದಾನ್ ಮೂರ್ತಿ

